2) ಈ ಸಂಘಗಳಿಂದ ಭದ್ರತಾ ಠೇವಣಿಯನ್ನು ಪಡೆಯಬಾರದು.

3) ಲೋಕೋಪಯೋಗಿ ಇಲಾಖೆಯಿಂದ ಕಾಂಟ್ರಾಕ್ಟ್ ಕೆಲಸಗಳನ್ನು ಪಡೆಯುವ ಮೊದಲು ಈ ಕಾರ್ಮಿಕ ಸಂಘಗಳು ಸದರಿ ಇಲಾಖೆಯಿಂದ ನೋಂದಾಯಿಸಿಕೊಳ್ಳುವ ನಿಬಂಧನೆಯಿಂದ ವಿನಾಯಿತಿಯನ್ನು ಕೊಡಲಾಗಿದೆ.

4) ಕಾರ್ಮಿಕ ಸಂಘಗಳು ಅವು ನೀಡಿದ ಬಿಲ್ಲುಗಳ ಶೇಕಡ 75 ಬಿಲ್ಲಿನ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳು ಬಿಲ್ಲು ನೀಡಿದ ಒಂದು ವಾರದೊಳಗಾಗಿ ಸಂಬಂಧಪಟ್ಟ ಸಂಘಕ್ಕೆ ಪಾವತಿ ಮಾಡತಕ್ಕದ್ದು.

ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಆರ್.ಟಿ.ಓ. ರವರ ತಪಾಸಣೆ ಬಗ್ಗೆ

1529. ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಷ್ಟ್ರೀಯ ಹೆದ್ದಾರಿ 4ರಲ್ಲಿ ನೆಲಮಂಗಲ ತಾಲ್ಲೂಕ್ ವ್ಯಾಪ್ತಿಯಲ್ಲಿ 1988 ರಿಂದ 1991ರ ಡಿಸೆಂಬರ್‌ವರೆವಿಗೆ ಆರ್‌ಟಿಓ ಇಲಾಖೆಯವರು ವಾಹನಗಳ ತಪಾಸಣೆ ಬಗ್ಗೆ ಹೂಡಲಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು ;

ಆ) ಈ ಮೊಕದ್ದಮೆಗಳಿಂದ ವಸೂಲಾದ ದಂಡ ಶುಲ್ಕವೆಷ್ಟು ;

ಇ) ಈ ರೀತಿ ವಸೂಲಾತಿಯಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಅಜೇಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) 10224.

ಆ) ರೂ. 43,45,715-00

ಇ) ಇಲ್ಲ.

ಈ) ಮೇಲಿನ (ಇ) ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ರಾಜ್ಯಾದ್ಯಂತ ಒಟ್ಟು ಸೀಮೆ ಎಣ್ಣೆ ವಿತರಣೆ ಬಗ್ಗೆ.

1539. ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದ್ಯಂತ ಒಟ್ಟು ಸೀಮೆಎಣ್ಣೆ ವಿತರಣೆ ಮಾಡಲು ಎಷ್ಟು ಜನ ಮಧ್ಯವರ್ತಿಗಳು ಇರುವರು ;

ಆ) ಅವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಎಷ್ಟು ಜನರಿಗೆ ಏಜೆನ್ಸಿ ಮಂಜೂರು ಮಾಡಿದೆ ;